## Fight against Injustice to Doctors

E-mail your complaints & opinions regarding Injustice to Doctors during entrance Exams, UG & PG Medical Education & Medical Practice to drharishsajjan@yahoo.com / drharishsajjan2204@gmail.com

## Uttarakhand Natural Calamity Relief Activities

1. To get the Location details of your loved ones stranded in Uttarakhand Natural Calamity

   Please Contact
   Airtel Helpline Numbers - 09818003057, 09958976317
   Idea Toll Free Helpline Numbers - 08191999999, 08191999998

2. Disaster Mitigation Management Centre Uttarakhand

   Please Contact
   Helpline Numbers - 0135-2710334, 2710335, 2710233

3. For Donation Details are as following

   a. DD Drawn in Favour of
   'CHIEF MINISTER (DISASTER MANAGEMENT) RELIEF FOUND '
   Payable at Uttarakhand.

   Postal Address : Disaster Mitigation And Management Center
   Uttarakhand Secretariat, Uttarakhand - 248001

   b. For online Transactions SBI, SB A/c No. 10587398235
   IFSC Code SBIN 0010164

**Sajjan Seva Sangha**




www.sajjanseva.org

# ವೈದ್ಯರ ದಿನಾಚರಣೆಯ ಶುಭಾಶಯಗಳು

# Happy Doctors' Day



# ಸಜ್ಜನ್ ಸೇವಾ ಸಂಘ

ಸಜ್ಜನರಿಂದ ಸಧೃಡ ಸೃಜನಶೀಲ ಸಹಬಾಳ್ವೆಯ ಸಮಾಜಕ್ಕಾಗಿ

**ಸ್ಥಾಪನೆ : 01–07–2013**

www.sajjanseva.org

# 'ವೈದ್ಯರ ದಿನ– ಜುಲೈ 01'

ಎಲ್ಲ ವೈದ್ಯರಿಗೂ 'ವೈದ್ಯರ ದಿನ' ದ ಶುಭಾಷಯಗಳಿರಯ್ಯಾ

ಎಲ್ಲ ವೈದ್ಯರಿಗೂ 'ವೈದ್ಯರ ದಿನ' ದ ಶುಭಾಷಯಗಳಿರಯ್ಯಾ॥

ಕೇಳಿರಿ ಯುವ ವೈದ್ಯರಿಗೆ 'ವೈದ್ಯರ ದಿನ' ದ ಆಚರಣೆಯ ಹಿನ್ನಲೆಯೇನಯ್ಯಾ?

ಯಾರೊಬ್ಬರಿಗೂ ತಿಳಿಯದು, ಯಾರ ಹುಟ್ಟಿದ ಹಬ್ಬವಿದು, ಯಾರದು ಡಾ॥ ಬಿ.ಸಿ.ರಾಯ?॥

ನನ್ನ ಸಹಪಾಠಿಗಳೆನ್ನುವರು ವೈದ್ಯಕೀಯ ವೃತ್ತಿ ನಿನಗಲ್ಲಯ್ಯ, ಇಳಿಯಲೇ ಬೇಕು ನೀ ರಾಜಕೀಯ

ತಿಳಿಯದವರಿಗೆ ಮಹಾತ್ಮಾ ಗಾಂಧಿಯ ವೈದ್ಯ, ರಾಯ ಅಗಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಹೋದಯ॥

ಅಗಿದ್ದ ನಮ್ಮ ಡಾ॥ ಬಿ.ಸಿ ರಾಯ, ಪಶ್ಚಿಮ ಬಂಗಾಳದ ಹುಲಿರಾಯ

ಅವರೇ ನಮ್ಮೆಲ್ಲರಿಗೂ ಮಾದರಿ ಕಾಣಿರಯ್ಯಾ, ಅವರಿಗೆ ಮನಪೂರ್ತಿ ನಮಿಸಿರಯ್ಯಾ॥

ರೋಗಿ ಬದುಕುಳಿದರೆ ಸಂಬಂಧಿಕರೆನ್ನುವರು 'ವೈದ್ಯೋ ನಾರಾಯಣೋ ಹರಿಃ'

'ಬಿಲ್' ತೋರಿದೊಡೆ ತೆಗಳುವರು, ರೊಕ್ಕಕ್ಕಾಗಿ ಜೊಲ್ಲು ಸುರಿಸುವ ನಾಯಿ॥

ತಪ್ಪಿಲ್ಲದಿದ್ದರೂ ಬಡಿಯುವರು ವೈದ್ಯರ ಹಿಡಿದು, ಬೈಯುತ ಸಾಯಿ ನಾಯಿ

ಕಾಪಾಡಲೇಬೇಕು ವೈದ್ಯರೆಲ್ಲರ ಆ ಬಾಬಾ ಶಿರಡಿ ಸಾಯಿ॥

ಆರೋಗ್ಯಕ್ಕಾಗಿ ಮೂರು ಹೊತ್ತು ಮದ್ಯ ಕುಡಿಯಿರಿ ಎಂದನಂತೆ ಒಬ್ಬ ವೈದ್ಯ, ಹೇಳಿದನೊಬ್ಬ ರೋಗಿ ಜೋಗಯ್ಯ

ನಾ ಎಂದೆ ಯಾರಾತ ಹೆಸರಾಂತ ವೈದ್ಯ? ಜೋಗಯ್ಯನಂದ ಅವರೇ ಮದ್ಯದ ದೊರೆ ಡಾ॥ ವಿಜಯ ಮಲ್ಲಯ್ಯ॥

ಡಾಕ್ಟರೇಟ್ ಪಡೆದವರನೂ ಕರೆಯುವರು ಜನ ಡಾಕ್ಟರ್, ಅವರಲ್ಲೊಬ್ಬ ಮುಖ್ಯಮಂತ್ರಿ ಕಾಣಯ್ಯಾ,

ಮಾಡಿದ್ದಕ್ಕಾಗಿ ಆಪರೇಶನ್ ಕಮಲ, ಕೊನೆಗೂ ಕೊಟ್ಟಿದ್ದವರಿಗೆ ಡಾಕ್ಟರೇಟ್ ಒಬ್ಬ ಪರಕೀಯ॥

ಆ ಮುಖ್ಯ ಮಂತ್ರಿ ಕೊನೆಗೂ 'ಕೈ' ಕೊಟ್ಟು 'ಕಮಲ'ಕ್ಕೆ ಒಡೆದನು 'ತೆಂಗಿನ ಕಾಯಿ'

ಮತ್ತೊಬ್ಬ ಮಂತ್ರಿ 'ಫ್ಯಾನ್' ಕೆಳಗೆ ಕುಳಿತು ಬೀಸುವ ಸಿನಿಮಾ ನಟಿಯರಿಗೆ ತನ್ನ ಕೈಯಾ

ಪ್ರಾಮಾಣಿಕತೆಯಿಂದ ಪರದಾಡಿದ್ದು ಅವರ ಕೆಸರೆರಚಾಟಕ್ಕೆ, ಕರುನಾಡ ಪ್ರಜ್ಞಾವಂತ ಬಡ ಪ್ರಜೆಗಳಯ್ಯ॥

ಭೀಷ್ಮನಂತೆ ಶಪತಗೈದಿದ್ದೆ ಜೀವನದಲ್ಲೊಮ್ಮೆ ಅರೆಕ್ಷಣಕ್ಕಾದರೂ, ನಾನಾಗಲೇಬೇಕೆಂದು 'RADIOLOGIST' ಕಾಣಯ್ಯಾ

'MBBS' ನಂತರ ಪ್ರವೇಶ ಪರೀಕ್ಷೆಗಳಲ್ಲಿ, ನನ್ನದು ಐದು ವರುಷಗಳ ದಶರಥನ ಅಶ್ವಮೇಧ ಯಾಗವಯ್ಯಾ

ಛಲಬಿಡದ ತ್ರಿವಿಕ್ರಮನಂತೆ ಇಂದು ನಾನಾಗಿರುವೆ 'RADIOLOGIST', ಇಂದು ನನ್ನ ಜನ್ಮ ಸಾರ್ಥಕವಾಯಿತಯ್ಯ॥

ಬೇಕಾಗಿರಲಿಲ್ಲ 'ಪಾಂಚ ಸಾಲ್' ಪಂಚಭೂತಗಳಾಣೆ, 'RADIOLOGY SEAT' ಪಡೆಯಲು ಅಯ್ಯಾ

ಕಾರಣ ನನ್ನ ಬಡತನ, ಹನುಮಂತನಾಟ, ಕೃಷ್ಣ ಲೀಲೆಗಳು ಮಹಾಭಾರತದ ಮೀಸಲಾತಿಗಳಯ್ಯಾ,

ಕಾರಣ ದುಡ್ಡಿದ್ದವರ ಮೋಸದಾಟಗಳಯ್ಯಾ, ಇದೇ ನೋಡ ನನ್ನಂತವರ ರಾಮಾಯಣವಯ್ಯಾ॥

ವೃತ್ತಿಗಳಲ್ಲಿ ವೈದ್ಯ ವೃತ್ತಿಗಿರೋ ಬೆಲೆ, ನಿನಗೇನು ಗೊತ್ತೋ ಮಂಕುತಿಮ್ಮಯ್ಯ

ಹೆಣ್ಣು ಹಡೆದವರು ಕಾಡಿ ಬೇಡುವರು, ಆಗು ಬಾ ನೀನಮ್ಮ ಅಳಿಯ, ಓ ನನ್ನ ಒಡೆಯ ॥

ಕಾರಣ ವೈದ್ಯನೊಬ್ಬ ಕುಬೇರನಾಗಲು ಬೇಕು, ಕೆಲವೇ ಕೆಲವು ದಿನಗಳು ಕಾಣೋ ಅಣ್ಣಯ್ಯ

ವೈದ್ಯನೊಬ್ಬನೇ ಕೊಡಬಲ್ಲ ತನ್ನ ಮಗಳಿಗೆ, ತನು ಮನ ಧನವನೆಲ್ಲವೆನ್ನುವುದೇ ಮಾವನ ಗೋಳಯ್ಯ॥

ಯಾರಾದರು ಕೇಳಿದೊಡೆ ಎನ್ನ ಹೆಸರ, ನಾ ಹೇಳುತ್ತಿದ್ದೆ ಡಾ॥ಹರೀಶ ಸಜ್ಜನ್ ಅಯ್ಯಾ

ಅವರು ಕೇಳುತ್ತಿದ್ದರು ನೀ ಏನೇನು 'ಆಪರೇಶನ್' ಮಾಡಿರುವೆ ಅಯ್ಯಾ ॥

ತಿರುಗಿ ನಾ ಹೇಳಿದ್ದೆ ನಾನು 'ಸರ್ಜನ್' ಅಲ್ಲ, 'ಸಜ್ಜನ್' ನನ್ನ ಮನೆತನದ ಹೆಸರಯ್ಯ

ಅನ್ವರ್ಥ ನಾಮದಂತಿಹದು 'ಸಜ್ಜನ್', ನಾನು ನಿಜವಾಗಲೂ ಸಜ್ಜನನಯ್ಯಾ॥

ಅದೇನೇ ಇರಲಿ ವೈದ್ಯಕೀಯ ವೃತ್ತಿಯಿದು ಸರ್ವಶ್ರೇಷ್ಠ ಕಾಣೋ ಮಂಕಯ್ಯಾ

ಬೇಡುವೆನು ಮರು ಜನ್ಮಕೂ ವೈದ್ಯ ವೃತ್ತಿಯ, ನಾ ಆ ವೈದ್ಯ ದೇವ ಧನ್ವಂತರಿಯಾ॥

ದೇವ ಮಹಾದೇವನಂತೆ ಅನೇಕ ಚೇತನಗಳು ಕಟ್ಟಿಸಿಹರು ವೈದ್ಯಕೀಯ ದೇವಾಲಯಗಳಿರಯ್ಯಾ

ಆವರಲ್ಲರೊಬ್ಬ ನಮ್ಮ ಪೂಜ್ಯ ದಿವಂಗತ ಮಹಾದೇವಪ್ಪ ರಾಮಪುರೆ ಕರುಣಾಮಯನಯ್ಯಾ॥

ಆ ಋಣವ ತೀರಿಸಲು ಸಾವಿರ ಸಾವಿರ ಜನುಮ ಸಾಲದಯ್ಯ

ಅದಕ್ಕಾಗಿ ಈ ಬಡಪಾಯಿಗಳು ಸಲ್ಲಿಸುತಿಹೆವು ಕೃತಜ್ಞತೆಯ, ಜೋಡಿಸಿ ನಮ್ಮ ಕೈಯ॥

ಮರಣಾನಂತರ, ಈ ನನ್ನ ಕಣ್ಣುಗಳು ಮೃತದೇಹವ ವೈದ್ಯಕೀಯ ದೇವಾಲಯಗಳಿಗೆ ಕೊಡುವರಯ್ಯಾ

ಅದಕ್ಕೆ ಈ ವಿಲ್ಲು ಬಾಂಡು, ಅಫಿಡೆವಿಟ್, ಅಗ್ರಿಮೆಂಟುಗಳೇ ಸಾಕ್ಷಿ ನೋಡಯ್ಯಾ॥

ಎಲ್ಲ ವೈದ್ಯರಿಗೂ 'ವೈದ್ಯರ ದಿನ' ದ ಶುಭಾಷಯಗಳಿರಯ್ಯಾ

ಎಲ್ಲ ವೈದ್ಯರಿಗೂ 'ವೈದ್ಯರ ದಿನ' ದ ಶುಭಾಷಯಗಳಿರಯ್ಯಾ ॥

ಡಾ॥ ಹರೀಶ್ ಸಜ್ಜನ್ (DM RD)
ಸಂಸ್ಥಾಪಕ ಸದಸ್ಯರು, 'ಸಜ್ಜನ್ ಸೇವಾ ಸಂಘ'
ಸರ್ವಜ್ಞನ ಮಾಸೂರು.